# ಸೇವಾಸಿಂಧು ಸಂಬಂಧ FAQ's

**ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳು:**

**1) ದಾಖಲಾತಿಗಳು ಇಲ್ಲದೆ ಸೇವಾಸಿಂಧುವಿನಲ್ಲಿ ಅರ್ಜಿ ಸಲ್ಲಿಸಬಹುದೇ?**

**ಉತ್ತರ:** ಇಲ್ಲ. ಫಲಾನುಭವಿಗಳು ಅರ್ಜಿ ಸಲ್ಲಿಸಲು ಮೊಟ್ಟ ಮೊದಲು ಸ್ಕ್ಯಾನ್ ಮಾಡಿರುವ ಅಗತ್ಯ ದಾಖಲಾತಿಗಳನ್ನು ಮತ್ತು ನಮೂನೆಗಳನ್ನು ಸಿದ್ಧಪಡಿಸಿಕೊಳ್ಳಬೇಕು.

**2) ಪಾಸನ್ನು ಯಾವುದೇ ಕೌಂಟರ್‌ನಿಂದ ಪಡೆಯಬಹುದೇ?**

**ಉತ್ತರ:** ಇಲ್ಲ. ಅರ್ಜಿ ಸಲ್ಲಿಸುವಾಗ ಪಾಸ್‌ಅರ್ಜಿದಾರರು ಸಂಚಾರ ಮಾಡುವ ಮಾರ್ಗಕ್ಕೆ ನಿಗದಿಯಾಗಿರುವ / ಹತ್ತಿರದ ಕೌಂಟರ್‌ಗೆ ಅರ್ಜಿ ಸಲ್ಲಿಸಬೇಕು. ಇತರೆ ಕೌಂಟರ್‌ಗೆ ಸಲ್ಲಿಸಿದಲ್ಲಿ ಅರ್ಜಿ ತಿರಸ್ಕೃತವಾಗುತ್ತದೆ.

**3) ಕೌಂಟರ್‌ನಲ್ಲಿ ವೈಯಕ್ತಿಕವಾಗಿ ಅರ್ಜಿಯನ್ನು ಸಲ್ಲಿಸಬಹುದೇ?**

**ಉತ್ತರ:** ಇಲ್ಲ. ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿ ಪಾಸ್‌ಪಡೆಯಬೇಕಾಗಿದೆ.

**4) ಪಾಸ್ ನವಿಕರಣಕ್ಕೆ ಹೊಸ ಅರ್ಜಿ ಸಲ್ಲಿಸಬೇಕೆ?**

**ಉತ್ತರ:** ಹೌದು.

**5) ಕೆ.ಎಸ್.ಆರ್.ಟಿ.ಸಿ ಪಾಸ್‌ಕೌಂಟರ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದೆಯೇ?**

**ಉತ್ತರ:** ಇಲ್ಲ ಆನ್‌ಲೈನ್ ಸೇವಾಸಿಂಧು ಪೋರ್ಟಲ್‌ನಲ್ಲಿಯೇ ಪಾಸ್ ಅರ್ಜಿಯನ್ನು ಸಲ್ಲಿಸಬೇಕು. ಸೇವಾಸಿಂಧು ಪೋರ್ಟಲ್‌ನಲ್ಲಿ ಸಲ್ಲಿಸದ ಅರ್ಜಿಯನ್ನು ಕೆ.ಎಸ್.ಆರ್.ಟಿ.ಸಿ ಪಾಸ್‌ಕೌಂಟರ್‌ನಲ್ಲಿ ಸಲ್ಲಿಸಿ ಪಾಸ್ ಪಡೆಯಬಹುದು.

**6) ಅರ್ಜಿಗೆ ಸ್ಪಷ್ಟೀಕರಣವು (Seek Clarification) ಕೋರಿದಾಗ ಏನು ಮಾಡಬೇಕು?**

**ಉತ್ತರ:** ಫಲಾನುಭವಿ ಸೇವಾಸಿಂಧುವಿನಲ್ಲಿ ತಮ್ಮ ಅರ್ಜಿಯ ಷರಾದಲ್ಲಿ ಕೆ.ಎಸ್.ಆರ್.ಟಿ.ಸಿ ಕೋರಿರುವಂತೆ ಸೂಕ್ತ ದಾಖಲಾತಿ / ಸ್ಪಷ್ಟೀಕರಣವನ್ನು ನೀಡಿ ಪುನಃ ಮೂರು ದಿನಗೊಳಗಾಗಿ ಸಲ್ಲಿಸಬೇಕು.

**7) ಫಲಾನುಭವಿ ಸ್ಪಷ್ಟೀಕರಣವನ್ನು (SeekClarification) ಮೂರು ದಿನಗೊಳಗಾಗಿ ಉತ್ತರಿಸದಿದ್ದರೆ ಏನಾಗುತ್ತದೆ?**

**ಉತ್ತರ:** ಅರ್ಜಿ ತಾನಾಗಿಯೇ ತಿರಸ್ಕೃತವಾಗುತ್ತದೆ.

**8) ಯಾವುದೇ ಕಾರಣಕ್ಕೆ ಅರ್ಜಿ ತಿರಸ್ಕೃತಗೊಂಡರೆ ಫಲಾನುಭವಿ ಮತ್ತೆ ಅರ್ಜಿ ಅವಕಾಶವಿರುತ್ತದೆಯೇ?**

**ಉತ್ತರ:** ಹೌದು. ಮತ್ತೊಮ್ಮೆ ಅವಶ್ಯ ದಾಖಲೆಗಳೊಂದಿಗೆ ಸೇವಾಸಿಂಧು ಮುಖಾಂತರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

**9) ಸೇವಾಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ ಏನು ಮಾಡಬೇಕು?**

**ಉತ್ತರ:** ವಿದ್ಯಾರ್ಥಿಯು ಅಗತ್ಯ ದಾಖಲೆಗಳೊಂದಿಗೆ ಸೇವಾಸಿಂಧು ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಿದ ನಂತರ ಕೊನೆಯಲ್ಲಿ ಲಭ್ಯವಾಗುವ ಭರ್ತಿಗೊಳಿಸಿದ ಅರ್ಜಿ ನಮೂನೆಯನ್ನು (Acknowledgement) ಮುದ್ರಿಸಿಕೊಂಡು ಅಭ್ಯಸಿಸುತ್ತಿರುವ ಶಾಲಾ / ಕಾಲೇಜಿನಲ್ಲಿ ಸಲ್ಲಿಸುವುದು. ಶಾಲಾ / ಕಾಲೇಜುಗಳ ಮುಖ್ಯಸ್ಥರು ದೃಢೀಕರಿಸಿದ ನಂತರ ನಿಗಮದ ಪಾಸ್ ಕೌಂಟರ್‌ನಲ್ಲಿ ಪಾಸಿನ ನಿಗದಿತ ಶುಲ್ಕ ಪಾವತಿಸಿ ಪಾಸ್ ಕಾರ್ಡ್ ಪಡೆದುಕೊಳ್ಳುವುದು.

Scanned by CamScanner

**10) ಶಾಲಾ/ಕಾಲೇಜಿನಲ್ಲಿ ದೃಢೀಕರಿಸಿದ ನಂತರ ವೈಯಕ್ತಿಕವಾಗಿ ಪಾಸ್ ಕೌಂಟರ್ ನಲ್ಲಿ ಪಾಸು ಪಡೆಯಲು ಅವಕಾಶವಿದೆಯೇ?**

ಉತ್ತರ: ಹೌದು. ದೃಢೀಕರಿಸಿದ ಅರ್ಜಿಯೊಂದಿಗೆ ಶಾಲಾ/ಕಾಲೇಜುಗಳ ಆಡಳಿತ ಮಂಡಳಿಯವರ ಮೂಲಕ ಅಥವಾ ವೈಯಕ್ತಿಕವಾಗಿ ಪಾಸ್ ಕೌಂಟರ್ ಗೆ ಭೇಟಿ ನೀಡಿ ಪಾಸು ಪಡೆಯಬಹುದು.

**11) ಅಗತ್ಯವಿರುವ ದಾಖಲಾತಿ ಸಲ್ಲಿಸಿದ ನಂತರ ಎಷ್ಟು ದಿನಗಳಲ್ಲಿ ಪಾಸ್ ಕಾರ್ಡ್ ಪಡೆಯಬಹುದು?**

ಉತ್ತರ: ಎಲ್ಲಾ ಅಗತ್ಯವಿರುವ ದಾಖಲಾತಿ ಸಲ್ಲಿಸಿದ 03 ದಿನಗಳಲ್ಲಿ (Working days) ಪಡೆಯಬಹುದು.

**12) ಪಾಸ್ ಕೌಂಟರ್ ನಲ್ಲಿ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕೆ?**

ಉತ್ತರ: ಹೌದು. ದೃಢೀಕೃತ ಅರ್ಜಿಯೊಂದಿಗೆ ಸೇವಾಸಿಂಧು ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡಿರುವ ಅಗತ್ಯ ದಾಖಲಾತಿಗಳನ್ನು (Xerox) ಲಗತ್ತಿಸಬೇಕು.

**13) ಇತರೆ ಸಂಸ್ಥೆಗಳ ವ್ಯಾಪ್ತಿಯ ಫಲಾನುಭವಿಗಳು ಕರಾರಸಾ ನಿಗಮದ ವ್ಯಾಪ್ತಿಗೆ ಅರ್ಜಿ ಸಲ್ಲಿಸಬಹುದೇ?**

**ಉತ್ತರ:** ಇಲ್ಲ.

Scanned by CamScanner